<u>**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**</u>

**ಸಿ.ಸಿ. ಸಂಖ್ಯೆ: 35 /2024**

**ಸಾಕ್ಷಿಯನ್ನು ದಿಃ 19.08.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ರಾಘವೇಂದ್ರ ಸಿ.ವಿ | ಸಿಡಬ್ಲ್ಯೂಃ 3 | ಪಿಡಬ್ಲ್ಯೂಃ 3 |
| ತಂದೆಯ ಹೆಸರು | ವಸಂತ | | |
| ವಯಸ್ಸು | 44 ವರ್ಷ | | |
| ಕೆಲಸ | ಅಬಕಾರಿ ಮುಖ್ಯ ಪೇದೆ | | |
| ವಾಸಸ್ಥಳ | ಹುಣಸೂರು | | |

<u>**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**</u>

ದಿಃ 01.10.2015 ರಿಂದ ಇಲ್ಲಯವರೆಗೆ ನಾನು ಹುಣಸೂರು ಅಬಕಾರಿ ವಲಯದಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದೇನೆ.

ದಿಃ 01.05.2023 ರಂದು ರಾಜ್ಯ ವಿಧಾನ ಸಭಾ ಚುನಾವಣೆಯ ಸಲುವಾಗಿ ಜಾರಿಯಲ್ಲಿದ್ದ ಮಾದರಿ ನೀತಿ ಸಂಹಿತೆಯ ತರುವಾಯ ನಾನು, ಚಾಸಾ-4 ಮತ್ತು ಚಾಸಾ-5 ರವರೊಂದಿಗೆ ಇಲಾಖಾ ವಾಹನದಲ್ಲಿ ರಾತ್ರಿ 9 ಗಂಟೆಯಲ್ಲಿ ಕಚೇರಿಯಿಂದ ಹೊರಟು, ಹುಣಸೂರು ನಗರ ವ್ಯಾಪ್ತಿಯಲ್ಲಿ ಗಸ್ತು ಕರ್ತವ್ಯ ಮಾಡುತ್ತಾ, ಹುಣಸೂರು - ಕೆ.ಆರ್ ನಗರ ಮುಖ್ಯ ರಸ್ತೆಯಲ್ಲಿರುವ ಹುಣಸೂರು ಪಟ್ಟಣ ಪೋಲೀಸ್ ಠಾಣಾ ಸರಹದ್ದು ಮುಕ್ತಾಯ ಎಂಬ ನಾಮಫಲಕ ಇರುವಲ್ಲಿಗೆ ರಸ್ತೆಗಾವಲು ನಡೆಸುತ್ತಾ, ರಾತ್ರಿ 9-20ಕ್ಕೆ ತಲುಪಿದೆವು. ಆ ಸ್ಥಳದಲ್ಲಿ ರಸ್ತೆಗಾವಲು ನಡೆಸುತ್ತಿದ್ದಾಗ ಹುಣಸೂರು ಪಟ್ಟಣ ಕಡೆಯಿಂದ ರಾತ್ರಿ 9-30ರ ಸಮಯದಲ್ಲಿ ಒಂದು ದ್ವಿಚಕ್ರ ವಾಹನವು ಬರುತ್ತಿರುವುದು ಕಂಡು ಬಂತು. ಸದರಿ ವಾಹನವನ್ನು ತಡೆದು ನಿಲ್ಲಿಸಲಾಗಿ, ಸದರಿ ವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇತ್ತು. ಸದರಿ ವಾಹನದ ಸವಾರನನ್ನು ಅದರಲ್ಲಿ ಏನಿದೆ ಎಂದು ಕೇಳಲಾಗಿ ಯಾವುದೇ ಉತ್ತರವನ್ನು ನೀಡಿಲಿಲ್ಲ. ಸದರಿ ಚೀಲ ಮತ್ತು ದ್ವಿ ಚಕ್ರವಾಹನವನ್ನು ಶೋಧಿಸಲು ಬೇರೆ ದ್ವಿಚಕ್ರ ವಾಹನದಲ್ಲಿ ಅದೇ ರಸ್ತೆಯಲ್ಲಿ ಹೋಗುತ್ತಿದ್ದ

ಚಾಸಾ–1 ಮತ್ತು 2 ರವರನ್ನು ತಡೆದು ಅವರಿಗೆ ವಿಚಾರ ತಿಳಿಸಿ ಅವರು ಪಂಚರಾಗಿ ಸಹಕರಿಸಬೇಕೆಂದು ಕೋರಲಾಗಿ ಅವರು ಒಪ್ಪಿದ ಮೇರೆಗೆ ನೊಟಿಸನ್ನು ಜಾರಿ ಮಾಡಲಾಯಿತು. ನಂತರ ನಾವು ಸಿಬ್ಬಂದಿಗಳು ಪರಸ್ಪರ ಅಂಗಶೋಧನೆಯನ್ನು ಮಾಡಿಕೊಂಡೆವು. ನ್ಯಾಯಲಯದಿಂದ ಶೋಧನಾ ವಾರಂಟ್ ಪಡೆಯಲು ಸಾಕಷ್ಟು ಕಾಲಾವಕಾಶ ಇಲ್ಲದೇ ಇದ್ದ ಕಾರಣ ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ತಯಾರಿಸಲಾಯಿತು. ಅದಕ್ಕೆ ಪಂಚರ ಸಹಿಯನ್ನು ಪಡೆಯಲಾಯಿತು. ನಂತರ ಪಂಚರ ಸಮಕ್ಷಮ ಸದರಿ ಬಿಳಿ ಚೀಲವನ್ನು ತೆರೆದು ನೋಡಿದಾಗ ಅದರಲ್ಲಿ ಮದ್ಯದ ಟೆಟ್ರಾ ಪ್ಯಾಕ್ ಗಳು ಕಂಡು ಬಂದವು. ಸದರಿ ಚೀಲದಲ್ಲಿದ್ದ ಟೆಟ್ರಾ ಪ್ಯಾಕ್ ಗಳನ್ನು ನೆಲಕ್ಕೆ ಸುರಿದು, ಎಣಿಕೆ ಮಾಡಿ ನೋಡಲಾಗಿ ತಲಾ 90 ಎಂ ಎಲ್ ನ ಒಟ್ಟು 50 ಓರಿಜಿನಲ್ ಚಾಯ್ಸ್ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಆಗಿದ್ದವು. ಅದರಲ್ಲಿ ಒಟ್ಟು 4.500 ಲೀಟರ್ ಮದ್ಯ ಇತ್ತು. ನಂತರ ಸದರಿ ಸವಾರನ ಬಳಿ ಸದರಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡಲು ಆತನ ಬಳಿ ಯಾವುದಾದರೂ ಪರವಾನಿಗೆ ವಗೈರೆ ಇದೆಯೇ ಎಂದು ಕೇಳಲಾಗಿ ಯಾವುದು ಇಲ್ಲ ಎಂದು ತಿಳಿಸಿದ. ಸದರಿ ದ್ವಿಚಕ್ರ ವಾಹನವನ್ನು ಪರಿಶೀಲಿಸಲಾಗಿ ಅದರ ನೋಂದಣಿ ಸಂಃ ಕೆ.ಎ–45–ಹೆಚ್ –8410 ಯ ಹಿರೋಹೋಂಡಾ ಸ್ಪ್ಲೆಂಡರ್ ಪ್ಲಸ್ ನ ಕಪ್ಪು ಮತ್ತು ನೀಲಿ ಮಿಶ್ರಿತ ಬಣ್ಣದ ಬೈಕ್ ಆಗಿತ್ತು. ಯಾವುದೇ ಪರವಾನಿಗೆ ಇಲ್ಲದೇ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿರುವುದು ಅಬಕಾರಿ ಕಾಯಿದೆಯ ಉಲ್ಲಂಘನೆಯಾಗಿರುವುದರಿಂದ ಆತನ ಹೆಸರು ವಿಳಾಸ ಕೇಳಲಾಗಿ ಸತೀಶ ಬಿನ್ ಸ್ವಾಮೀಗೌಡ, ಮೈಲಾಂಬೂರು ಗ್ರಾಮ, ಹುಣಸೂರು ತಾಲ್ಲೂಕು ಎಂದು ತಿಳಿಸಿದ. ನಂತರ ಚಾಸಾ–5 ರವರು ಆರೋಪಿಗೆ ಸ್ಥಳದಲ್ಲಿ ನೋಟಿಸನ್ನು ನೀಡಿ ತನಿಖೆಗೆ ಸಹಕರಿಸಬೇಕೆಂದು ಹೇಳಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು. ನಂತರ ದೊರೆತ ಮದ್ಯದಲ್ಲಿ ತಲಾ 90 ಎಂ.ಎಲ್ ನ ಒಟ್ಟು 30 ಟೆಟ್ರಾ ಪಾಕೇಟ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ಸಂಗ್ರಹಿಸಿ ಇಲಾಖಾ ಮೊಹರು ಸಂಃ 310 ರಿಂದ ಮುದ್ರೆ ಮಾಡಲಾಯಿತು. ನಂತರ ಮೊಕದ್ದಮೆಯ ವಿವರಗಳನ್ನು ಬರೆದು, ಸಣ್ಣ ಸಣ್ಣ ಚೀಟಿಗಳನ್ನು ತಯಾರಿಸಲಾಯಿತು. ಸ್ಥಳದಲ್ಲಿಯೇ ಮಾದರಿ ಸೀಲಿನ ನಕಲನ್ನು ತಯಾರಿಸಲಾಯಿತು. ಚಾಸಾ–5 ರವರ ಉಕ್ತ ಲೇಖನದಂತೆ ನನ್ನ ಕೈಬರಹದಲ್ಲಿ ರಾತ್ರಿ 9–30 ರಿಂದ 11–00

ಗಂಟೆಯವರೆಗೆ ಸ್ಥಳದಲ್ಲಿ ಇಲಾಖಾ ವಾಹನದ ಬೆಳಕಿನ ಸಹಾಯದಿಂದ ಸ್ಥಳಮಹಜರು ಕ್ರಮವನ್ನು ಜರುಗಿಸಿ ದ್ವಿಚಕ್ರ ವಾಹನ ರಾಸಾಯನಿಕ ವಿಶ್ಲೇಷಣೆಗಾಗಿ ಸಂಗ್ರಹಿಸಿದ ಟೆಟ್ರಾ ಪ್ಯಾಕೇಟ್ ಗಳು ಮತ್ತು ಉಳಿದ 20 ಟೆಟ್ರಾ ಪ್ಯಾಕೇಟ್ ಗಳನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ನಂತರ ಮುದ್ದೆ ಮಾಲನ್ನು ಮತ್ತು ವಾಹನವನ್ನು ಕಚೇರಿಗೆ ತಂದು, ಚಾಸಾ–5 ರವರು ಪ್ರಕರಣ ದಾಖಲಿಸಿದರು. ಸಾಕ್ಷಿ ನಿಪಿ–1ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ–1(ಸಿ) ಎಂದು ಗುರುತಿಸಲಾಯಿತು. ನಂತರ ಮಾದರಿಗಾಗಿ ಸಂಗ್ರಹಿಸಿದ ಮುದ್ದೆಮಾಲನ್ನು ದಿಃ 06.03.2023 ರಂದು ರಾಸಾಯನಿಕ ವಿಶ್ಲೇಷಣೆಗಾಗಿ ನಾನೇ ತೆಗೆದುಕೊಂಡು ಹೋಗಿರುತ್ತೇನೆ. ನಂತರ ದಿಃ 23.08.2023 ರಂದು ವರದಿಯನ್ನು ಸ್ವೀಕರಿಸಿ ಚಾಸಾ–8 ರವರ ಮುಂದೆ ಹಾಜರುಪಡಿಸಿರುತ್ತೇನೆ. ಸದರಿ ರಾಸಾಯನಿಕ ವರದಿಯನ್ನು ಈಗ ನೋಡುತ್ತಿದ್ದು ನಿಪಿ–6 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ದಿಃ 08.06.2023 ರಂದು ಚಾಸಾ–8 ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ಆ ದಿನ ಅಮಾನತ್ತುಪಡಿಸಿಕೊಂಡ ಮುದ್ದೆಮಾಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮುದ್ದೆಮಾಲನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ–1 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಬಿ.ಆರ್.ಎಲ್ ವಕೀಲರಿಂದಃ**

ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.